# ಸಂಪತ್ತು ಇಹ – ಪರದ ಜೀವಾಳ



ಪ್ರವಾದಿ ಮುಹಮ್ಮದ್ (ಸ.ಅ.ಸ.) ಹೇಳಿದರು, ಖಂಡಿತವಾಗಿಯೂ ಈ ಸಂಪತ್ತು ಹಚ್ಚ ಹಸಿರು ಮತ್ತು ರುಚಿಕರ ವಾಗಿದೆ. ಮುಸಿಮನ ಸಂಪತ್ತಂತೂ ಬಹಳ ಉತ್ತಮವಾಗಿದೆ. ಅವನು ಅದನ್ನು ಸತ್ತಯ ಪೂರ್ಣವಾಗಿ ಗಳಿಸಿದರೆ ಹಾಗೂ ಅನಾಥರು, ಬಡವರು ಮತ್ತು ಪ್ರಯಾಣಿಕರಿಗಾಗಿ ಖರ್ಚು ಮಾಡಿದರೆ, ತದ್ವಿರುದ್ದವಾಗಿ ಅದನ್ನು ಸತ್ಯ ಪೂರ್ಣವಾಗಿ ಗಳಿಸದವನು (ನಿಷಿದ್ಧ ವಿಧಾನದಿಂದ ಗಳಿಸುವವನು) ತಿಂದಷ್ಟು ಹೊಟ್ಟೆ ತುಂಬದವನಂತಿದ್ದಾನೆ. ಆ ಸಂಪತ್ತು ಕಿಯಾಮತ್ (ನ್ಯಾಯ ತೀರ್ಮಾನದ) ದಿನ ಅವನ ವಿರುದ್ಧ ಸಾಕ್ಷಿಯಾಗುವುದು. ಹದೀಸ್ – ಬುಖಾರಿ.

ಇತಿಹಾಸವನ್ನು ಅಧ್ಯಯನ ಮಾಡಿದಾಗ ಮನುಷ್ಯನ ನೈಜ ಗುರಿ ಅಂಪತ್ತನ್ನು ಗಳಿಸುವುದು ಆಗಿತ್ತು. ಫಿರ್‌ಔನನ ಆಪ್ತ ಮಿತ್ರನಾಗಿದ್ದ ಕಾರೂನನ ಸಂಪತ್ತಿನ ಲೆಕ್ಕ ಇಡುವುದಂತೂ ಬಿಡಿ, ಅದರ ಖಜಾನೆಯ ಬೀಗದ ಗೊಂಚಲುಗಳನ್ನು ಹೊರಲು ಮುನ್ನೂರು ಹೇಸರ ಕತ್ತೆಗಳು ಬೇಕಾಗಿದ್ದವು. (ಜ್ಯೂಯಿಶ್ ಎನ್ ಸೈಕ್ಲೋಪೀಡಿಯ ಭಾಗ 7 ಪುಟ 556) ಆದರೆ ಅವನು ದೇವಧಿಕ್ಕಾರಿಯಾಗಿದ್ದರಿಂದ ಅವನನ್ನು ನೆಲದೊಳಗೆ ಹುದುಗಿಸಿವಾಗ (ಜೀವಂತ) ಅವನ ಸಂಪತ್ತು ಯಾವ ಉಪಯೋಗಕ್ಕೂ ಬರಲಿಲ್ಲ. ಮನುಷ್ಯನ ಜೀವನವೇ ಸಂಪತ್ತನ್ನು ಒಟ್ಟುಗೂಡಿಸಿ ಸಾಮ್ರಾಜ್ಯವನ್ನು ವಿಸ್ತರಿಸುವುದೇ ಆಗಿತ್ತು. ಅದಕ್ಕಾಗಿ ಕೋಟೆ, ಕೊತ್ತಲಗಳು, ರಾಜ್ಯ, ಸಾಮ್ರಾಜ್ಯಗಳು ನಾಶವಾಗಿದ್ದವು. ಸಾವಿರಾರು ಕುಟುಂಬಗಳು ವೈರತ್ವವನ್ನು ಕಟ್ಟಿಕೊಂಡಿದ್ದವು. ದಾಯಾದಿಗಳೊಳಗೆ ಯುದ್ದಗಳೇ ನಡೆದಿದ್ದವು. ಇತಿಹಾಸ ಬಲ್ಲವರು ಯಾರೂ ಇದನ್ನು ಅಲ್ಲಗಳೆಯಲಾರರು.

ವರ್ತಮಾನ ಕಾಲವನ್ನು ಅವಲೋಕಿಸುವಾಗಲೂ ಸಂಪತ್ತಿಗಾಗಿ ಮನುಷ್ಯನು ಎಷ್ಟೆಲ್ಲಾ ಹಗರಣಗಳನ್ನು ಹುಟ್ಟು ಹಾಕುತ್ತಾನೆ ಎಂಬುವುದನ್ನು ನಾವು ದಿನಂಪ್ರತಿ ನೋಡುತ್ತಿದ್ದೇವೆ. ತಮ್ಮ ಕ್ಷಣಿಕ ಜೀವನಕ್ಕಾಗಿ ಕೋಟಿಗಟ್ಟಲೆ ಸಂಪತ್ತನ್ನು ಕ್ರೋಡೀಕರಿಸಲು ಮನುಷ್ಯನು ಹವಣಿಸುತ್ತಿರುವುದನ್ನು ಕಂಡಾಗ ಅದರ ಬಗ್ಗೆ ಅಯ್ಯೋ ಪಾಪವೆಂದು ಅನಿಸುತ್ತದೆ. ಇಂದು ಕೂಡ ಸಂಪತ್ತಿಗಾಗಿ ತಮ್ಮ ಕುಟುಂಬದೊಳಗೆ ವೈಷಮ್ಯ ಹುಟ್ಟಿಸಿ ವ್ಯಾಜ್ಯವನ್ನು ನ್ಯಾಯಾಲಯಕ್ಕೆ ಕೊಂಡುಹೋದ ಅಂಬಾನಿ, ಲಂಕೇಶ್‌ನಂತಹವರ ಕುಟುಂಬಗಳ ಬಗ್ಗೆ ತಿಳಿಯದವರು ಯಾರೂ ಇಲ್ಲ. ಸಂಪತ್ತು ಮನುಷ್ಯನನ್ನು ಸ್ವಾರ್ಥಿಯನ್ನಾಗಿಸುತ್ತದೆ. ಇಂತಹವರಿಗೆ ಅದು ಎಂದಿಗೂ ಅದು ಹಿತಕರವಾಗಿರುವುದಿಲ್ಲ. ಸಂಪತ್ತನ್ನು ಕೂಡಿ ಹಾಕುವ ಮಂಚೆ ಯಾಕಾಗಿ ನಾನು ಸಂಪತ್ತನ್ನು ಕೂಡಿ ಹಾಕುತ್ತೇನೆ ಎಂದು ಮನುಷ್ಯನು ಚಿಂತನೆಯನ್ನು ಮಾಡಬೇಕು ಮತ್ತು ಅದರ ಹಕ್ಕು ಭಾಧ್ಯತೆಗಳು ಏನು ಇವೆ ಎಂದು ತಿಳಿದುಕೊಳ್ಳಬೇಕು.

ಈ ನಿಟ್ಟಿನಲ್ಲಿ ಇಸ್ಲಾಮ್ ಸಂಪತ್ತಿನ ಬಗ್ಗೆ ಸ್ಪಷ್ಟ ನಿಲುವನ್ನು ಜನರ ಮುಂದಿಡುತ್ತದೆ. ಇಲ್ಲಿ ಅಲ್ಲಾಹನ ಆಜ್ಞೆಯನ್ನು ಪಾಲಿಸುವವನು, ಪರಲೋಕದ ಮೇಲೆ ವಿಶ್ವಾಸವಿದ್ದವನು ಸಂಪತ್ತನ್ನು ಹೊಂದಲು ಭಯಪಡುವುದಿಲ್ಲ ಅವನ ಪಾಲಿನ ಈ ಸಂಪತ್ತು ಹಚ್ಚ ಹಸಿರು ಮತ್ತು ರುಚಿಕರವಾಗಿರುತ್ತದೆ.

ಈ ಸಂಪತ್ತು ನನ್ನು ಪಾಲಿಗೆ ಅಲ್ಲಾಹನ ವತಿಯಿಂದ ಬಂದ ಅನುಗ್ರಹ ಹಾಗೂ ವಿಶ್ವಸ್ಥ ನಿಧಿಯೆಂದು ಗ್ರಹಿಸಿ ಅದನ್ನು ಎಲ್ಲಿ ಖರ್ಚು ಮಾಡಬೇಕು ಹೇಗೆ ಮಾಡ ಬೇಕೆಂದು ಚೆನ್ನಾಗಿ ತಿಳಿದು ಕೊಂಡು, ಅದರ ಹಕ್ಕು ದಾರರಿಗೆ ತಲುಪಿಸಲು ಮುಂದಾಗುತ್ತಾನೆ. ಧರ್ಮದ ಸೇವೆಗಾಗಿ ಅನಾಥರು, ಬಡವರು, ನಿರ್ಗತಿಕರು ಮತ್ತು ಪ್ರಮಾಣಿಕರಿಗಾಗಿ ತನ್ನಲ್ಲಿರುವ ಸಂಪತ್ತನ್ನು ವಿನಿಯೋಗಿಸಲಿಕ್ಕಾಗಿ ಆತನ ಮುಂದೆ ಮಾರ್ಗವು ತೆರೆದಿರುತ್ತದೆ. ಈ ಆಲೋಚನೆಗೆ ಕೂಡ ಆತನು ಧರ್ಮ ಭದ್ಧವಾಗಿ ಸಂಪತ್ತನ್ನು ಗಳಿಸಿದಾಗ ಮಾತ್ರ ಬರುತ್ತದೆ. ಅನ್ಯಥಾ ಧರ್ಮ ನಿಷಿದ್ಧ ಮಾರ್ಗದಿಂದ ಆತನು ಸಂಪತ್ತನ್ನು ಗಳಿಸಿ ಕೂಡಿಡಲು ಪ್ರಯತ್ನಿಸಿದಾಗ ಮಹಾ ಜಿಪುಣನಾಗುತ್ತಾನೆ ಮತ್ತು ಆತನಿಂದ ಇಡೀ ಸಮುದಾಯ ಮತ್ತು ಸಮಾಜ ಕಷ್ಟಕ್ಕೀಡಾಗಬೇಕಾಗುತ್ತದೆ. ಜನ ಸಾಮಾನ್ಯರ ಸಮಸ್ಯೆಗಳ ಬಗ್ಗೆ ಆತನಿಗೆ ಯಾವುದೇ ಚಿಂತೆಯಾಗಲಿ, ಅದರ ಸಂಕಷ್ಟದ ಬಗೆ ಅರಿವು ಆಗಲಿ ಇರುವುದಿಲ್ಲ. ಅದಲ್ಲದೆ ಸದಾ ತನ್ನಲ್ಲಿರುವ ಸಂಪತ್ತು ಮತ್ತೂ ವೃದ್ಧಿಸಲಿ ಎಂದು ಪ್ರಯತ್ನಿಸುವಾಗ ಆತನ ನೈಜ ಶಾಂತಿ, ನೆಮ್ಮದಿ ಮತ್ತು ಸಂತೃಪ್ತಿಯಿಂದ ವಂಚಿತನಾಗುತ್ತಾನೆ. ಅವನಿಗೆ ಎಷ್ಟು ತಿಂದರೂ ಹೊಟ್ಟು ತುಂಬದವರಂತೆ ಇದ್ದು ಅವನ ಹಸಿವು ಎಂದಿಗೂ ತಣಿಯುವುದಿಲ್ಲ. ಮತ್ತು ಅವನು ದಾಹದ ರೋಗಿಯಂತಿರುತ್ತಾನೆ. ಹೀಗಿದ್ದು ಅವನು ಇಹಲೋಕವನ್ನು ತೊರೆದು ಹೋಗುವಾಗ ಕೊಂಡುಹೋಗುವ ಸಂಪತ್ತು ಕಫನ್–ದಫನ್‌ಗಾಗಿ ಕೇವಲ 100ರೂ ಗಳಷ್ಟು ಮಾತ್ರ ಇಂತಹವರಿಗೆ ಇಹದಲ್ಲೂ ಮತ್ತು ಪರದಲ್ಲೂ ನೆಮ್ಮದಿ ಇರುವುದಿಲ್ಲ. ಆತನು ಹೊಂದಿದ ಸಂಪತ್ತು ಕಿಯಾಮತ್ ದಿದಂದು ಆತನ ವಿರುದ್ಧವೇ ಸಾಕ್ಷಿಯಾಗುವಾಗ ಆತನು ಸಂಪೂರ್ಣ ನಾಶ ಹೊಂದುವನು ಎಂದು ಅಲ್ಲಾಹನು ಪ್ರವಾದಿ ಮುಹಮ್ಮದ್ (ಸ.ಅ.ಸ)ರವರ ಮುಖಾಂತರ ಮಸ್ಲಿಮರಿಗೆ ತಿಳಿಸಿದನು.

ಹೀಗಿರುವಾಗ ಪ್ರಸಕ್ತಕಾಲದಲ್ಲಿ ಮುಸ್ಲೀಮರಲ್ಲಿರುವ ಶ್ರೀಮಂತ ವ್ಯಕ್ತಿಗಳು ತಮ್ಮ ಸಂಪತ್ತನ್ನು ನ್ಯಾಯ ಸಮ್ಮತವಾದ ಮಾರ್ಗದಿಂದಲೇ ಗಳಿಸಬೇಕು ಮತ್ತು ಅಲ್ಲಾನ ಮಾರ್ಗದಲ್ಲಿ ಖರ್ಚುಮಾಡಲು ತೊಡಗಬೇಕು. ಯಾರಿಗೆ ಅಲ್ಲಾಹನು ಸಂಪತ್ತನ್ನು ನೀಡಿರುವನೋ, ಅದು ತನ್ನನ್ನು ಪರೀಕ್ಷಿಸಲಿಕ್ಕಾಗಿದೆ ಎಂದು ತಿಳಿದು ಕಿಯಾಮತ್‌ನಂದು ಈ ಸಂಪತ್ತು ತನ್ನ ಪರವಾಗಿ ಸಾಕ್ಷಿಯಾಗುವಂತೆ ಪರಿವರ್ತಿಸಿಕೊಳ್ಳಬೇಕು. ಪ್ರಸಕ್ತ ಪರಿಸ್ಥಿತಿಯಲ್ಲಿ ಅಲ್ಲಾಹನ ಮಾರ್ಗದಲ್ಲಿ ಸಂಪತ್ತನ್ನು ವಿನಿಯೋಗಿಸಲು ಶ್ರೀಮಂತರಿಗೆ ಒಂದು ಉತ್ತಮ ಅವಕಾಶವಿದೆ. ಈ ಅವಕಾಶವನ್ನು ಸದುವಯೋಗ ಪಡಿಸಿಕೊಂಡರೆ ಅದರ ಸಂಪತ್ತು ಇಹಲೋಕದಲ್ಲೂ ಪರಲೋಕದಲ್ಲೂ ಅವರಿಗೆ ಹಿತಕರವಾಗಿರುವುದು ಮತ್ತು ಈ ವ್ಯವಸ್ಥೆಯು ಇರುವ ತನಕ ನಿರಂತರ ಪುಣ್ಯ ದೊರುಕುತ್ತಾ ಇರುವುದು ಈ ಎಲ್ಲಾ ಸಮುದಾಯದೊಳಗೆ ಇರುವ ಸಮಸ್ಯೆಗಳಿಗೆ ಪರಿಹಾರ ನೀಡುವ ನಿಟ್ಟಿನಲ್ಲಿ ಹಲವಾರು ಸಂಘ–ಸಂಸ್ಥೆಗಳು ಸಂಘಟನೆಗಳು ಕಾರ್ಯಚರಿಸುತ್ತದೆ. ಆದರೆ ಇಸ್ಲಾಮ್ ಧರ್ಮವನ್ನು ಅಧ್ಯಯನ ಮಾಡಿ ಧರ್ಮದೊಳಗೆ ನವ ಮುಸ್ಲಿಮರ ಮುಂದಿನ ಜೀವನಕ್ಕಾಗಿ ಯಾವುದೇ ವ್ಯವಸ್ಥೆ ನಮ್ಮಲ್ಲಿಲ್ಲ. ಇವರಿಗಾಗಿ

ಒಂದು ಕೇಂದ್ರವನ್ನು ಸ್ಥಾಪಿಸಿ, ಅಲ್ಲಿ ಇಸ್ಲಾಮಿನ ಸರಿಯಾದ (ಕುರ್‌ಆನ್– ಹದೀಸ್‌ಹಳಿಂದ ಮಾತ್ರ) ಜ್ಞಾನವನ್ನು ಭೋಧಿಸುವ ವ್ಯವಸ್ಥೆ, ಇಸ್ಲಾಮ್ ಸ್ವೀಕರಿಸುವಾಗ ಈ ಹಿಂದೆ ಇದ್ದಂತಹ ವೃತ್ತಿಯನ್ನು ತೊರೆದು ಬಂದವರಿಗೆ ಹೊಸ ವೃತ್ತಿಯನ್ನು ತೆಗೆಸಿ ಕೊಡುವ ವ್ಯವಸ್ಥೆ ಇಸ್ಲಾಮಿನ ಸಂದೇಶ ಪ್ರಚಾರ ಮಾಡ ಬಯಸುವವರಿ ಸರಿಯಾದ ಮಾರ್ಗದರ್ಶನದ ವ್ಯವಸ್ಥೆ ಹಾಗೂ ಇದಕ್ಕೆ ಸಂಬಂಧ ಪಟ್ಟ ಇನ್ನಿತರ ವ್ಯವಸ್ಥೆಗಳಿಂದೊಡಗೂಡಿದ ಒಂದಿ ಕೇಂದ್ರವನ್ನು ನಮ್ಮ ನಗರದಲ್ಲಿ ಇರಬೇಕಾಗುದು ಕಾಲದ ಬೇಡಿಕೆಯಾಗಿದೆ. (ಪ್ರವಾದಿಯವರ ಕಾಲದಲ್ಲಿ ಇಂತಹ ಕೇಂದ್ರಗಳಿದ್ದವು) ಇದರ ವ್ಯವಸ್ಥೆಗಾಗಿ ನಮ್ಮ ಸುತ್ತಮುತ್ತಲಿರುವ ಶ್ರೀಮಂತರು ಪ್ರಯತ್ನಿಸಿ ತಮ್ಮ ಸಂಪತ್ತನ್ನು ಅದಕ್ಕೆ ವಿನಿಯೋಗಿಸಿದರೆ ಖಂಡಿತವಾಗಿಯೂ ಈ ಸಂಪತ್ತು ಅವರ ಇಹ ಪರದ ಜೀವಾಳವಾಗಿ ಮಾರ್ಪಡುವುದರಲ್ಲಿ ಯಾವುದೇ ಸಂಶಯವಿಲ್ಲ. ನಮ್ಮ ನಗರದಲ್ಲಿರುವ ಶ್ರೀಮಂತರು ಈ ಯೋಜನೆಯನ್ನು ಕಾರ್ಯ ರೂಪಕ್ಕೆ ತಂದು ಇತರರಿಗೆ ಮಾದರಿಯಾಗಲಿ. ಈ ನಿಟ್ಟಿನಲ್ಲಿ ಉಡುಪಿ ಮುಸ್ಲಿಮ್ ವೆಲ್ಫೇರ್ ಎಸೋಸಿಯೇಷನ್ ಪ್ರಯತ್ನಿಸಲಿ ಮತ್ತು ಅಲ್ಲಾಹನು ಇವರ ಸೇವೆಯನ್ನು ಸ್ವೀಕರಿಸಲಿ............ ಆಮೀನ್


**ಯು.ಅನ್ವರ್ ಅಲಿ ಕಾಪು**<br>
ತೌಹೀದ್ ಎಲೆಕ್ಟ್ರಿಕಲ್ಸ್<br>
ಶಾನ್ ಮಾರ್ಕೆಟ್, ಕೊಂಬಗುಡ್ಡೆ<br>
ಮಲ್ಲಾರ್– ಕಾಪು– 576 106